ಮಂಜೂರಾತಿ ನೀಡಿದ್ದು ಟೆಂಡರ್ ಕರೆಯಲಾಗಿದೆ ಎಂದು ಹೇಳುತ್ತಾರೆ. ಇವರ ಅಂದಾಜುಪಟ್ಟಿಗೆ ಟೆಂಡರ್ ಯಾವಾಗ ಆಗುತ್ತದೆ, ಮಳೆಗಾಲ ಬಂದು ಮತ್ತೊಂದು ಬೇಸಿಗೆಗೆ ಜನರು ಕಾಯಬೇಕೇ? ಈ ವರ್ಷವಂತೂ ಕೃಷಿ ಮಾಡುವಂತಿಲ್ಲ ಈ ದುರವಸ್ಥೆಗೆ ತಾವು ಏನು ಹೇಳುತ್ತೀರಿ? ಎರಡನೆಯದಾಗಿ ಉಳಿಯ ತಡ್ಕ ಅಣೆಕಟ್ಟಿಗೆ 1.20 ಲಕ್ಷ ರೂ.ಗಳ ಅಂದಾಜಿಗೆ ಮಂಜೂರಾತಿಯನ್ನು ನೀಡಿ ಶೀಘ್ರವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ಹೇಳಿದ್ದೀರಿ ಆ ಅಂದಾಜಿಗೆ ಮಂಜೂರಾತಿ ಯಾವಾಗ ಆಗುತ್ತದೆ, ಆ ಬಯಲಿನ ಜನರು ಈ ವರ್ಷವಂತೂ ಕೃಷಿ ಕಾಣುವಂತಿಲ್ಲ. ಮುಂದಿನ ವರ್ಷಕ್ಕಾದರೂ ಕೃಷಿಗೆ ಯೋಗ್ಯವಾಗುವಂತಹ ರೀತಿಯಲ್ಲಿ ಅದರ ಪ್ರಯೋಜನ ಪಡೆಯುವ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ತಿಪ್ಪೇಸ್ವಾಮಿ: ಉಪಾಧ್ಯಕ್ಷರೆ, ಈ ಕಿಂಡಿ ಅಣೆಕಟ್ಟಿಗೆ ಇವತ್ತಾಗಲೇ ಟೆಂಡರ್ ಕರೆದಿದ್ದೇವೆ, ಈ ಮಳೆಗಾಲ ಪ್ರಾರಂಭವಾಗುವುದೊರಳಗೆ ಆ ಕೆಲಸವನ್ನು ಪೂರೈಸಿ ಕೊಡುತ್ತೇವೆ; ಮತ್ತೊಂದು ಕಾಮಗಾರಿಗೆ ನಾಲ್ಕು ಲಕ್ಷ ರೂಪಾಯಿಗಳಾಗುತ್ತವೆಂದು ಅಂದಾಜುಪಟ್ಟಿ ಸಿದ್ದವಾಗಿದೆ; ಅದಕ್ಕೆ ನಾನೇ ಮಂಜೂರಾತಿಯನ್ನು ಕೊಟ್ಟು ಅದಕ್ಕೂ ಕೂಡ ಆಯವ್ಯಯದಲ್ಲಿ ಹಣವನ್ನಿಟ್ಟಿದ್ದೇವೆ. ಈ ಕಿಂಡಿ ಅಣೆಕಟ್ಟಿನ ಕೆಲಸವನ್ನು ಮಳೆ ಬರುವುದರೊಳಗೆ ಮುಗಿಸಿಕೊಡುತ್ತೇನೆ, ಇದನ್ನು ಕೂಡ ಇನ್ನೇನು ಕೆಲಸ ಪ್ರಾರಂಭ ಮಾಡಿಸಿ ಮಾಡಿಕೊಡುತ್ತೇನೆ.

ಶ್ರೀ ಕುಂಬಳೆ ಸುಂದರರಾವ್: ಸಚಿವರನ್ನು ಶಹಭಾಷ್ ಎಂದು ನಾವು ಮೆಚ್ಚಿಕೊಳ್ಳುತ್ತೇವೆ.

ವಿಷಯ: ಮಲೆನಾಡು ಪ್ರದೇಶಾಭಿವೃದ್ಧಿ ಕಾಮಗಾರಿಗಳು

208 (1489)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ಮಂಡಳಿಗೆ 1997-98ನೇ ಸಾಲಿನಲ್ಲಿ ಮೀಸಲಿಟ್ಟ ಹಣವೆಷ್ಟು?

ಆ) ಮಲೆನಾಡು ಅಭಿವೃದ್ಧಿ ಮಂಡಳಿಗೆ 1997-98ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು?

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು):

ಅ) 30 ಕೋಟಿ ರೂ.ಗಳು

ಆ) 15.70 ಕೋಟಿ ರೂ.ಗಳು

ವಿಷಯ: ಮಲೆನಾಡು ಪ್ರದೇಶಾಭಿವೃದ್ಧಿ ಕಾಮಗಾರಿಗಳು

208 (1250)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿಗೆ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಶಾಸಕರ ಅನುದಾನದಿಂದ ಎಷ್ಟು ಕಾಮಗಾರಿಗಳನ್ನು ತೀರ್ಥಹಳ್ಳಿ ಕ್ಷೇತ್ರದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಇದಕ್ಕಾಗಿ ನಿಗಧಿಪಡಿಸಿದ ಹಣವೆಷ್ಟು?

ಆ) ಇದುವರೆವಿಗೂ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ?

ಇ) ಪ್ರಾರಂಭಿಸದೇ ಇರುವ ಕಾಮಗಾರಿಗಳ ಯಾವುವು? ಅವುಗಳನ್ನು ಯಾವ ಕಾರಣಕ್ಕಾಗಿ ಪ್ರಾರಂಭಿಸಿಲ್ಲ.

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡ ರಾಜ್ಯ ಸಚಿವರು):

ಅ) 19 ಕಾಮಗಾರಿಗಳು ನಿಗಧಿಪಡಿಸಿದ ಹಣ 21 ಲಕ್ಷಗಳು.

ಆ) 10 ಕಾಮಗಾರಿಗಳು ಮುಗಿದಿದ್ದು 7 ಕಾಮಗಾರಿಗಳ ಪ್ರಗತಿಯಲ್ಲಿರುತ್ತದೆ.

ಇ) ಈ ಕೆಳಕಂಡ ಕಾಮಗಾರಿಗಳ ಅಂದಾಜು ಪಟ್ಟಿಯು ಇನ್ನೂ ಅನುಮೋದನೆ ಆಗಿಲ್ಲವಾದ್ದರಿಂದ ಈ ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸಿಲ್ಲ.

1) ಬೊಮ್ಮರಸಯ್ಯನ ಅಗ್ರಹಾರದಿಂದ ಹೊರೇಬೈಲು ಬುಣ್ಣಪುರ ರಸ್ತೆಯಲ್ಲಿ ಹನ್ನಂಗಿ ಹಳ್ಳಕ್ಕೆ ಕಾಲು ಸೇತುವೆ (ಅಂದಾಜು ಮೊತ್ತ 10 ಲಕ್ಷ)

2) ಕುಬ್ಬಲು ಕನ್ನಂಗಿ-ಕಿಕ್ಕರಿ ರಸ್ತೆಯಲ್ಲಿ ಸೋಮವಾರಿ ಹಳ್ಳಕ್ಕೆ ಹಳ್ಳಕ್ಕೆ ಸೇತುವೆ (ಅಂದಾಜು ಮೊತ್ತ 4 ಲಕ್ಷ)

ಶ್ರೀ ಆರಗಜ್ಞಾನೇಂದ್ರ: ಉಪಾಧ್ಯಕ್ಷರೆ, ನಮಗೆ ಒದಗಿಸತಕ್ಕಂಥ ಹಣವೇ ಕಡಿಮೆ ಅದರಲ್ಲಿ ನಾವು ಕಾಮಗಾರಿಗಳನ್ನು ಕೊಟ್ಟರೆ, ಈ ಮಲೆನಾಡು ಅಭಿವೃದ್ಧಿ ಮಂಡಳಿ, ಒಂದು ವರ್ಷದಲ್ಲಿ ಕಾಮಗಾರಿಯನ್ನು ಪ್ರಾರಂಭವೇ ಮಾಡುವುದಿಲ್ಲ; ಅಂದಾಜುಪಟ್ಟಿಯನ್ನೇ ಅನುಮೋದನೆ ಮಾಡುವುದಿಲ್ಲವೆಂದರೆ ಈ ಮಂಡಳಿ ಎಷ್ಟು ನಿಷ್ಕ್ರಿಯವಾಗಿದೆ ಎನ್ನುವುದು ತಿಳಿಯುವುದು. ನನ್ನ ಕ್ಷೇತ್ರಕ್ಕೆ ಕೊಟ್ಟಿದ್ದೇ 21 ಲಕ್ಷ ರೂ.